‘ಯಾಕೆ ನನ್ನ ಕಾಟೇಜನ್ನು ಇನ್ನೂ ಜಾಸ್ತಿ ಬೆಲೆಗೆ ಬೇರೆಯವರಿಗೆ ಮಾರಿ ಇನ್ನೂ ದುಡ್ಡು ಮಾಡುವ ಇರಾದೆ ಏನು ನಿಮಗೆ?’

ರಾತ್ರಿ ನಿದ್ರೆ ಬರುವವರೆಗೆ ಟೀವಿ. ನೋಡುತ್ತಲೋ, ಪುಸ್ತಕ, ಪತ್ರಿಕೆಗಳನ್ನು ಓದಿಕೊಂಡೋ ಇರುತ್ತಿದ್ದಳು.

ಅಂತೂ ಕೆಲ ದಿನಗಳು ಹೀಗೆಯೇ ಕಳೆದು ಹೋದುವು. ಶಶಿಕಾಂತನ ಅಸ್ತಿತ್ವವೇ ಇಲ್ಲವೆನಿಸಿಬಿಟ್ಟೆನಲ್ಲ ಎಂದು ಬೀಗಿಕೊಳ್ಳುತ್ತಿರುವಾಗಲೇ, ಅಂದು ಸಾಯಂಕಾಲ ವಾಕ್‌ಗೆಂದು ಕಾಟೇಜ್‌ಗೆ ಬೀಗ ಜಡಿದು ತಿರುಗಿ ನೋಡಿದರೆ ಶಶಿಕಾಂತ ಸಂಕೋಚದಿಂದ ಮಾರು ದೂರದಲ್ಲಿ ನಿಂತದ್ದನ್ನು ಗಮನಿಸಿದಳು. ಅವಳಿಗೆ ನಖಶಿಖಾಂತ ಉರಿದು ಬಂತು. ಆದರೆ ಅವನನ್ನು ದಾಟಿ ಹೋಗುವಷ್ಟು ಅಲ್ಲಿ ಎಡೆ ಇರಲಿಲ್ಲ. ಅವನ ದೇಹದಾರ್ಢ್ಯವೇ ಅಂತಹುದು. ಈ ವಯಸ್ಸಿನಲ್ಲೂ ಅವನು ದೈಹಿಕವಾಗಿ ಬಹಳ ಬದಲಾಗಿಲ್ಲ ಅನ್ನಿಸಿತು.

**ಬೆನ್ನು ಬಿಡದ ಬೇತಾಳನಂತೆ ಶಶಿಕಾಂತ ಮತ್ತೆ ಒಂದು ದಿನ ಅವಳ ಮನೆಗೆ ಬಂದ. ಈ ಬಾರಿ ಆಕೆ ಅವನ ನೋಟ ತಪ್ಪಿಸಲು ಪ್ರಯತ್ನಿಸಲಿಲ್ಲ. ಈ ಕೆಲವು ದಿನಗಳಲ್ಲಿ ಅವನು ಜೀವಚ್ಛವವಾಗಿ ಹೋಗಿದ್ದ. ಗುಳಿ ಬಿದ್ದ ಕೆನ್ನೆಗಳು, ಪಾತಾಳಕ್ಕೆ ಇಳಿದು ಹೋದಂತಿದ್ದ ಕಣ್ಣುಗಳು, ಅವನ ಮುಖದಲ್ಲಿನ ವರ್ಚಸ್ಸನ್ನು ಮಾಯವಾಗಿಸಿದ್ದವು...**

‘ಸುಜಾತಾ, ಎಷ್ಟು ದಿನ ಅಂತ ಹೀಗೆ ತಪ್ಪಿಸಿ ಓಡುತ್ತಿಯಾ? ಒಂದೈದು ನಿಮಿಷ ಮಾತನಾಡಬಹುದೇ?’

ಆಕೆ ಮತ್ತೆ ಬೀಗ ತೆರೆಯಲಿಲ್ಲ. ಅಲ್ಲೇ ವರಾಂಡದ ಕುರ್ಚಿಯ ಮೇಲೆ ಕುಳಿತಳು. ಆತನೂ ಆಕೆಯ ಎದುರಿನ ಇನ್ನೊಂದು ಕುರ್ಚಿಯಲ್ಲಿ ಕುಳಿತ. ಆನಂತರ ಮುಜುಗರ ಪಟ್ಟುಕೊಂಡೇ ನುಡಿದ:

‘ಸುಜಾತಾ, ನಿನ್ನ ಕ್ಷಮೆಗೂ ಅರ್ಹನಲ್ಲ. ನಾನು ಮಾಡಿದ ಕೆಲಸವೇ ಅಂತಹುದು. ನೀನು ಇಲ್ಲಿರುವುದು ನನಗೆ ಖಂಡಿತವಾಗಿಯೂ ಗೊತ್ತಿರಲಿಲ್ಲ. ಆದರೆ ನಿನ್ನನ್ನು ಕಂಡ ಬಳಿಕ ಎಷ್ಟೊಂದು ಸಂತಸ ಪಟ್ಟೆನೆಂದು ಹೇಗೆ ಹೇಳಲಿ? ನನಗೆ ಗೊತ್ತು, ನೀನು ಖಂಡಿತವಾಗಿಯೂ ನನ್ನೊಂದಿಗೆ ಮಾತನಾಡಲು ಇಷ್ಟಪಡುವುದಿಲ್ಲ. ಅಂಥ ದ್ರೋಹ ಮಾಡಿದ್ದೇನೆ ನಾನು ನಿನಗೆ. ಸುಜಾತಾ, ನೀನು ಮಾತನಾಡುವುದು ಬೇಡ. ಆದರೆ, ನನ್ನ ಮಾತುಗಳನ್ನಾದರೂ ಆಲಿಸುವ ಕೃಪೆ ತೋರು, ನಿರಾಕರಿಸಬೇಡ.’

ಸುಜಾತಾ ಯಾವ ಭಾವನೆಯನ್ನೂ ತೋರಿಸದೆ ವಿಗ್ರಹದಂತೆ ಕುಳಿತಿದ್ದಳು. ಮಾತನಾಡಲು ಉಳಿದಿರುವುದಾದರೂ ಏನು? ಇವನು ಮತ್ತೊಮ್ಮೆ ಬಲೆ ಬೀಸುತ್ತಿಲ್ಲವಷ್ಟೇ. ತಾನು ಇನ್ನಷ್ಟು ಜಾಗರೂಕಳಾಗಬೇಕು. ಆಕೆಯ ಮೌನವೇ ಸಮ್ಮತಿ ಎಂದುಕೊಂಡ ಆತ ಮಾತು ಮುಂದುವರಿಸಿದ.

‘ಅಂದು ನಿನ್ನನ್ನು ಕಡೆಗಣಿಸಿ ಲಕ್ಷ್ಮಿಯನ್ನು ವರಿಸಿದೆ. ಜೀವನದಲ್ಲಿ ಹಣದ ಕೊರತೆಯನ್ನೇ